ಪೂರಿ ತಟ್ಟೆ ಹಿಡಿದುಕೊಂಡಿದ್ದರು. ತಟ್ಟೆಯನ್ನು ನೆಲದ ಮೇಲೆ ಕುಕ್ಕಿ, ಓಡಿಹೋಗುತ್ತಿರುವ ನಂಬಿಕೆಗೆ ಅನರ್ಹನಾದ ಸಾಲಗಾರನ ಮೇಲೆ ಎರಗಿ ಕುತ್ತಿಗೆ ಪಟ್ಟಿ ಹಿಡಿಯುವ ಮಾರವಾಡಿಯಂತೆ ಮುದುಕಿಯ ಮೇಲೆ ಎರಗಿ ಎರಡು ಕೈಗಳನ್ನು ಹಿಡಿದುಕೊಂಡು ದರದರನೆ ಎಳೆಯುತ್ತಾ ಕತ್ತಲು ಕೋಣೆಗೆ ತಳ್ಳಿಬಿಟ್ಟನು. ಆಸೆಯ ಆ ಹೋದೋಟ ಬಿಸಿಗಾಳಿಯಿಂದ ಬತ್ತಿ ಬಾಡಿ ಹೋಯಿತು.

ಅತಿಥಿಗಳು ಊಟ ಮುಗಿಸಿದರು. ಮನೆಯವರೂ ಊಟ ಮಾಡಿದರು. ವಾದ್ಯದವರು, ಅಗಸರು, ಚಮ್ಮಾರರು ಎಲ್ಲರದ್ದೂ ಊಟ ಆಯಿತು. ಆದರೆ ಚಿಕ್ಕಮ್ಮನನ್ನು ಕರೆಯಲು ಯಾರೂ ಬರಲಿಲ್ಲ. ಬುದ್ಧಿರಾಮ ಮತ್ತು ರೂಪ ಇಬ್ಬರೂ ಮುದಿಚಿಕ್ಕಮ್ಮನ ನಾಚಿಕೆಗೇಡುತನಕ್ಕೆ ಸರಿಯಾದ ಶಿಕ್ಷೆ ಕೊಡಬೇಕೆಂದು ನಿರ್ಧರಿಸಿದ್ದರು. ಆಕೆಯ ವೃದ್ಧಾಪ್ಯ, ದೈನ್ಯತೆ, ಅವಿವೇಕದ ಮೇಲೆ ಯಾರಿಗೂ ಕರುಣೆ ಬರುತ್ತಿರಲಿಲ್ಲ. ಆದರೆ ಪುಟ್ಟಿ ಒಬ್ಬಳು ಮಾತ್ರ ಮುದುಕಿಗಾಗಿ ಪರಿತಪಿಸುತ್ತಿದ್ದಳು.

ಪುಟ್ಟಿಗೆ ಮುದಿಚಿಕ್ಕಮ್ಮನನ್ನು ಕಂಡರೆ ತುಂಬ ಪ್ರೀತಿ. ಪಾಪ! ಅವಳು ಮುಗ್ಧ ಬಾಲಕಿ. ಬಾಲ್ಯ ಸಹಜವಾದ ವಿನೋದ, ಚಂಚಲತೆಯ ಗಂಧವೂ ಅವಳಿಗಿರಲಿಲ್ಲ. ಎರಡು ಸಾರಿ ಅಪ್ಪ ಅಮ್ಮ ನಿಷ್ಕರುಣೆಯಿಂದ ಚಿಕ್ಕಮ್ಮನನ್ನು ಎಳೆದು ತಳ್ಳಿದ್ದು ನೋಡಿ ಅವಳ ಹೃದಯ ನೊಂದುಕೊಂಡಿತ್ತು. ಜನ ಏಕೆ ಚಿಕ್ಕಮ್ಮನಿಗೆ ಪೂರಿ ಕೊಡುವುದಿಲ್ಲ ಎಂದು ಆ ಬಾಲಕಿ ಕಸಿವಿಸಿಗೊಳ್ಳುತ್ತಿತ್ತು. ಅತಿಥಿಗಳು ಎಲ್ಲ ಪೂರಿಯನ್ನು ತಿಂದುಬಿಡುತ್ತಾರೆಯೇ? ಒಂದು ವೇಳೆ ಅತಿಥಿಗೆ ಮೊದಲೇ ಚಿಕ್ಕಮ್ಮ ಪೂರಿ ತಿಂದರೆ ಏನಾಗುತ್ತಿತ್ತು? ಅವಳು ಚಿಕ್ಕಮ್ಮನ ಹತ್ತಿರ ಹೋಗಿ ಧೈರ್ಯ ಹೇಳಬೇಕೆಂದು ಬಯಸಿದರೂ ತಾಯಿಯ ಭಯದಿಂದ ಹೋಗುತ್ತಿರಲಿಲ್ಲ. ತನ್ನ ಪಾಲಿನ ಪೂರಿಯನ್ನು ಅವಳು ತಿಂದಿರಲಿಲ್ಲ. ಡಬ್ಬಿಯಲ್ಲಿ ಅದನ್ನು ಹಾಕಿಟ್ಟುಕೊಂಡಿದ್ದಳು. ಅದನ್ನು ಚಿಕ್ಕಮ್ಮನಿಗೆ ಕೊಡಲು ಇಟ್ಟುಕೊಂಡಿದ್ದಳು. ಆದರೆ ಧೈರ್ಯ ಬರುತ್ತಿರಲಿಲ್ಲ. ನಾನು ಪೂರಿ ತಂದಿದ್ದು ನೋಡಿ ಎದ್ದು ಕುಳಿತುಕೊಳ್ಳುತ್ತಾಳೆ. ಚಿಕ್ಕಮ್ಮನಿಗೆ ಅದೆಷ್ಟು ಸಂತೋಷವಾಗುತ್ತದೆ! ನನ್ನ ತುಂಬಾ ಮುದ್ದು ಮಾಡುತ್ತಾಳೆ!

ರಾತ್ರಿ ಹನ್ನೊಂದು ಗಂಟೆಯಾಗಿತ್ತು. ರೂಪ ಅಂಗಳದಲ್ಲಿ ಮಲಗಿ ನಿದ್ರಿಸುತ್ತಿದ್ದಳು. ಪುಟ್ಟಿಗೆ ನಿದ್ರೆಯೇ ಬರಲಿಲ್ಲ. ಚಿಕ್ಕಮ್ಮನಿಗೆ ಪೂರಿ ಕೊಡುವ ಸಂತೋಷದಲ್ಲಿ ನಿದ್ದೆಯೇ ಹತ್ತಲಿಲ್ಲ. ಪೂರಿಯ ಡಬ್ಬಿಯನ್ನು ಮುಂದೆಯೇ ಇಟ್ಟುಕೊಂಡಿದ್ದಳು. ಅಮ್ಮ ಮಲಗಿದ್ದಾಳೆಂದು ದೃಢವಾಯಿತು. ಮೆಲ್ಲಗೆ ಎದ್ದಳು. ಹೇಗೆ ಹೋಗುವುದು? ಎಲ್ಲ ಕಡೆ ಕತ್ತಲು. ಒಲೆಯಲ್ಲಿ ಮಾತ್ರ ಕೆಂಡವಿತ್ತು. ಒಲೆ ಹತ್ತಿರ ಒಂದು ನಾಯಿ ಮಲಗಿತ್ತು. ಪುಟ್ಟಿ ಎದುರಿಗಿರುವ ನಿಂಬೆ ಮರ ನೋಡಿದಳು. ಅಲ್ಲಿ ಹನುಮಂತ ಕೂತಿರುವ ಹಾಗೆ ಕಾಣಿಸಿತು. ಅವನ ಬಾಲ, ಗದೆ ಎಲ್ಲ ಕಾಣಿಸಿತು. ಭಯದಿಂದ ಕಣ್ಣು ಮುಚ್ಚಿದಳು. ಅಷ್ಟರಲ್ಲಿ ನಾಯಿ ಎದ್ದು ಕುಳಿತಿತು. ಪುಟ್ಟಿಗೆ ಸಮಾಧಾನವಾಯಿತು. ಮಲಗಿರುವ ಮನುಷ್ಯರಿಗಿಂತ ಎಚ್ಚೆತ್ತಿರುವ ನಾಯಿಯೇ ಅವಳ ಧೈರ್ಯಕ್ಕೆ ಕಾರಣವಾಯಿತು. ಡಬ್ಬಿ ಎತ್ತಿಕೊಂಡು ಮೆಲ್ಲಗೆ ಮುದಿಚಿಕ್ಕಮ್ಮನ ಕೋಣೆಗೆ ನಡೆದಳು.

ಮುದಿಚಿಕ್ಕಮ್ಮನಿಗೆ ಯಾರೋ ತನ್ನನ್ನು ಎಳೆದುಕೊಂಡು ಹೋಗಿದ್ದು ಮಾತ್ರ ನೆನಪಿತ್ತು. ಆಮೇಲೆ ಯಾರೋ ತನ್ನನ್ನು ಬೆಟ್ಟಗುಡ್ಡಗಳ ಮೇಲೆ ಎತ್ತಿಕೊಂಡು ಹೋಗಿರುವಂತೆ, ತನ್ನ ಕಾಲುಗಳು ಬಂಡೆಗಲ್ಲುಗಳಿಗೆ ಬಡಿಯುತ್ತಿರುವಂತೆಯೂ ಮತ್ತೆ ತನ್ನನ್ನು ಮೇಲಿಂದ ಕೆಳಕ್ಕೆ